## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಶರಣಬಸಪ್ಪ ಎಸ್. ರಾಸೂರ, ಸದಸ್ಯರು, ಪ್ರಸ್ತುತ ಅಧ್ಯಕ್ಷರು, ಡೊಂಗರಗಾಂವ ಗ್ರಾಮ ಪಂಚಾಯತಿ, ಕಲಬುರುಗಿ ತಾಲ್ಲೂಕು ಕಲಬುರುಗಿ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43 ಎ (1)ರನ್ವಯ ಕ್ರಮ ಜರುಗಿಸುವ ಕುರಿತು.

ಓದಲಾಗಿದೆ :

1) ಶ್ರೀ ಚಂದ್ರಶೇಖರ್ ಎನ್ ಗೋಳೆದ, ಮಾಜಿ ಅಧ್ಯಕ್ಷರು, ಡೊಂಗರಗಾಂವ ಗ್ರಾಮ ಪಂಚಾಯತಿ, ಕಲಬುರುಗಿ ತಾಲ್ಲೂಕು, ಕಲಬುರುಗಿ ಜಿಲ್ಲೆ ಇವರು ಸರ್ಕಾರಕ್ಕೆ ಸಲ್ಲಿಸಿದ ದೂರು ದಿನಾಂಕ 04.12.2018.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕಲಬುರುಗಿ ಜಿಲ್ಲೆ ರವರ ಪತ್ರ ಸಂಖ್ಯೆ : ಜಿಪಕ:ಡಿಆರ್ ಡಿಎ:ಗ್ರಾಪಂ:151:2017-18 ದಿನಾಂಕ 05.12.2018.
3) ವಿಚಾರಣಾಧಿಕಾರಿಗಳು ಹಾಗೂ ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರುಗಿ ಇವರ ಪತ್ರ ಸಂಖ್ಯೆ ಕಂ/ಪ್ರಾಆಕ/ಜಿಪಂ/1252018-19/804 ದಿನಾಂಕ 13.05.2019.
4) ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 1135/ಗ್ರಾಪಂಅ/2018 ದಿನಾಂಕ 02.02.2019

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿ ಶ್ರೀ ಚಂದ್ರಶೇಖರ್ ಎನ್ ಗೋಳೆದ, ಮಾಜಿ ಅಧ್ಯಕ್ಷರು, ಡೊಂಗರಗಾಂವ ಗ್ರಾಮ ಪಂಚಾಯತಿ, ಕಲಬುರುಗಿ ತಾಲ್ಲೂಕು, ಕಲಬುರುಗಿ ಜಿಲ್ಲೆ ದಿನಾಂಕ 04.12.2018 ರಂದು ಇವರು ಸರ್ಕಾರಕ್ಕೆ ಸಲ್ಲಿಸಿದ ದೂರಿನಲ್ಲಿ, ಇದೇ ಗ್ರಾಮಪಂಚಾಯತಿಯ ಸದಸ್ಯರಾದ ಶ್ರೀ ಶರಣಪ್ಪ ಎಸ್. ರಾಸೂರ, ಸದಸ್ಯ ಯಾವುದೇ ಮನೆ ಕಟ್ಟದೇ ಒತ್ತಾಯ ಪೂರ್ವಕವಾಗಿ ತನ್ನ ಹೆಂಡತಿಯ ಹೆಸರಿಗೆ ಎರಡು ಬಿಲ್ ತೆಗೆದುಕೊಂಡಿರುತ್ತಾರೆ.ಅಲ್ಲದೇ ಗ್ರಾಮ ಸಭೆಯಲ್ಲಿ ಸಿಬ್ಬಂದಿಗಳ ಮೇಲೆ ಹಲ್ಲೆ ಮಾಡಿದ್ದು, ಭಾರತೀಯ ದಂಡ ಸಂಹಿತೆ ಕಲಂ 341, 323, 353, 504, 506 ಆರ್/ಡಬ್ಲೂ 334 ರಡಿಯಲ್ಲಿ ದೂರು ದಾಖಲಾಗಿರುತ್ತದೆ. ಇಷ್ಟೆಲ್ಲಾ ಅವ್ಯವಹಾರ ನಡೆದಿದ್ದು, ಸಾಕ್ಷಿ ಸಮೇತ 14 ಜನ ಸದಸ್ಯರ ರುಜುವಾತಗಳೊಂದಿಗೆ ದೂರು ಕೊಟ್ಟರೂ ಸಹ, ಇಲ್ಲಿಯವರೆಗೆ ಅವನ ಮೇಲೆ ಯಾವುದೇ ಕ್ರಮ ಜರುಗಿಸಿಲ್ಲವೆಂದು, ವಿಳಂಬವಾಗುತ್ತಿರುವ ಕಾರಣ ಕಾನೂನು/ಯಾವ ಅಧಿಕಾರಿಯೂ ನನಗೆ ಏನೂ ಮಾಡುವುದಿಲ್ಲವೆಂದು ಪದೇ ಪದೇ ಅಧ್ಯಕ್ಷರು ಹಾಗೂ ಸಿಬ್ಬಂದಿಗಳ ಮೇಲೆ ಅವ್ಯಾಚ್ಯ ಶಬ್ದಗಳನ್ನು ಬಳಸುತ್ತಾ, ಮಾನಸಿಕ ಕಿರುಕುಳ ನೀಡುತ್ತಿದ್ದಾನೆ. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೂ ದೂರು ನೀಡಿದ್ದು, ವಿಚಾರಣಾಧಿಕಾರಿಗಳು ಕೂಡ ಅವನನ್ನು ದೋಷಿ ಎಂದು ವರದಿ ನೀಡಿರುತ್ತಾರೆ. ಆದುದರಿಂದ ಆರೋಪಿತ ಸದಸ್ಯನ ಮೇಲೆ ಕಾನೂನು ಕ್ರಮ ತೆಗೆದುಕೊಂಡು ಸರಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟವನ್ನು ವಸೂಲಿ ಮಾಡಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43 (ಎ) ರನ್ವಯ ಅವನ ಸದಸ್ಯತ್ವನ್ನು ಕೂಡಲೇ ರದ್ದು ಮಾಡಬೇಕೆಂದು ವಿನಂತಿಸಿದ್ದರು.

ಮೇಲೆ ಓದಲಾದ (2)ರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕಲಬುರುಗಿ ಜಿಲ್ಲೆ ರವರ ಪತ್ರದಲ್ಲಿ ಡೊಂಗರಗಾಂವ ಗ್ರಾಮ ಪಂಚಾಯತಿಯ ಸದಸ್ಯರಾದ ಶ್ರೀ ಶರಣಬಸಪ್ಪ ಎಸ್ ರಾಸೂರ ರವರು ತಮ್ಮ ಹೆಂಡತಿಯ ಹೆಸರಿಗೆ 2013-14ನೇ ಸಾಲಿನಲ್ಲಿ "ಬಸವ ವಸತಿ ಯೋಜನೆ" ಯಡಿ ಮನೆ ಆಯ್ಕೆಯಾಗಿದ್ದು, ನಿಜವಿರುತ್ತದೆ. ಇವರ ಫಲಾನುಭವಿ ಕೋಡ್ ಸಂ.341464 ಇದ್ದು ದಾಖಲೆಗಳ ಪ್ರಕಾರ

ಈ ಫಲಾನುಭವಿಯು ಶಕುಂತಲನ ಗಂಡ ಶರಣಬಸಪ್ಪ, ಇವರು ಎರಡು ಕಂತುಗಳ ಹಣವನ್ನು ಬೇರೆಯವರು ನಿರ್ಮಿಸಿದ ಮನೆ ತಮ್ಮದೆಂದು ತೋರಿಸಿ ಹಣವನ್ನು ಪಡೆದಿರುತ್ತಾರೆ. ಆದರೆ, ವಾಸ್ತವಿಕವಾಗಿ ಇವರು ಮನೆ ಕಟ್ಟಿಕೊಳ್ಳದೇ ಸರ್ಕಾರದ ಹಣವನ್ನು ಪಡೆದಿರುವುದು ವಿಚಾರಣೆ ಸಮಯದಲ್ಲಿ ಕಂಡುಬಂದಿರುತ್ತದೆಂದು ಪಿ.ಡಿ.ಓ. ರವರು ಸದರಿ ಫಲಾನುಭವಿಗೆ ಮನೆ ನಿರ್ಮಿಸಿಕೊಳ್ಳುವಂತೆ ನೋಟೀಸ್ ಕೂಡ ಈ ಹಿಂದೆ ನೀಡಿರುವುದಾಗಿ ತಿಳಿಸಿರುತ್ತಾರೆ.

ಗ್ರಾಮ ಪಂಚಾಯತಿ ಸದಸ್ಯರಾದ ಶ್ರೀ ಶರಣಬಸಪ್ಪ ಎಸ್.ರಾಸೂರ ಇವರು ಗ್ರಾಮ ಪಂಚಾಯತಿ ಪಿಡಿಓ ಹಾಗೂ ಸಿಬ್ಬಂದಿಗಳ ಮೇಲೆ ಹಲ್ಲೆ ಮಾಡಿರುವುದಾಗಿ ಹಾಗೂ ಅವರ ವಿರುದ್ಧ ಕಮಲಾಪೂರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಎಫ್.ಐ.ಆರ್. ಕೂಡ ದಾಖಲಾಗಿರುತ್ತದೆ.ಪ್ರಯುಕ್ತ ಸದರಿ ಸದಸ್ಯರ ಮೇಲೆ ಗ್ರಾಮ ಪಂಚಾಯತಿಯ ಅಧ್ಯಕ್ಷರು/ಉಪಾಧ್ಯಕ್ಷರು ಹಾಗೂ14 ಜನ ಸದಸ್ಯರು ಕೂಡಿ ದೂರು ಸಲ್ಲಿಸಿರುತ್ತಾರೆ.

ಅದರಂತೆ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ ಉಪ ವಿಭಾಗ, ಕಲಬುರುಗಿಯವರು ಕೂಡ ದಿನಾಂಕ 25.09.2017ರಂದು ತಾಲ್ಲೂಕು ಮಟ್ಟದ ಅಧಿಕಾರಿಗಳನ್ನೊಳಗೊಂಡ ತಂಡವನ್ನು ರಚಿಸಿ, ಸ್ಥಳ ಪರಿಶೀಲನೆ ಮಾಡಿ ತನಿಖೆ ಕೈಗೊಂಡು ಪಂಚನಾಮೆ ಮಾಡಿ ಸದರಿಯವರು "ಬಸವ ವಸತಿ ಯೋಜನೆ" ಅಡಿ 2013-14 ನೇ ಸಾಲಿನಲ್ಲಿ ಅವರ ಹೆಂಡತಿಯಾದ ಶ್ರೀ ಶಕುಂತಲನ ಗಂಡ ಶರಣಬಸಪ್ಪ (ಕೋಡ್ ನಂ.341464) ಇವರು ತಮ್ಮ ಹೆಸರಿಗೆ ಬೇರೆಯವರು ನಿರ್ಮಿಸಿದ ಮನೆಯನ್ನು ತಮ್ಮದೆಂದು ತೋರಿಸಿ, ಸರ್ಕಾರದ ಹಣವನ್ನು ದುರುಪಯೋಗ ಮಾಡಿಕೊಂಡಿರುವುದು ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ ಉಪ ವಿಭಾಗ, ಕಲಬುರುಗಿ ರವರ ವರದಿಯಿಂದ ಸಾಬೀತಾಗಿರುತ್ತದೆಂದು ತಿಳಿಸಿರುತ್ತಾರೆ.ಸದರಿ ಸದಸ್ಯರು ಗ್ರಾಮ ಸಭೆಯಲ್ಲಿ ಸಿಬ್ಬಂದಿಗಳ ಮೇಲೆ ಹಲ್ಲೆ ಮಾಡಿರುವುದು ನಿಜವಿರುತ್ತದೆಂದು ಅಧ್ಯಕ್ಷರು ಗ್ರಾಮ ಪಂಚಾಯತಿ ಡೊಂಗರಗಾಂವ ಇವರು ದಿನಾಂಕ 01.01.2018ರಂದು ಈ ಕಛೇರಿಗೆ ವರದಿ ಸಲ್ಲಿಸಿರುತ್ತಾರೆ. ಆದ್ದರಿಂದ ಸದರಿ ಸದಸ್ಯರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ಅಧಿನಿಯಮ 1993ರ ಪ್ರಕರಣ 43 (ಎ) ರನ್ವಯ ದುರ್ನಡತೆ ಹಾಗೂ ತಲೆತಗ್ಗಿಸುವಂತಹ ನಡತೆಯ ತಪ್ಪಿತಸ್ಥರೆಂದು ಭಾವಿಸಿ ಸದರಿಯವರು ಗ್ರಾಮ ಪಂಚಾಯತ್ ಸದಸ್ಯತ್ವದಿಂದ ರದ್ದುಗೊಳಿಸುವ ಸಂಬಂಧ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕಲಬುರುಗಿ ಜಿಲ್ಲೆ ಇವರು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿರುತ್ತಾರೆ.

ವಿಚಾರಣಾಧಿಕಾರಿಗಳು ಹಾಗೂ ಪ್ರಾದೇಶಿಕ ಆಯುಕ್ತರು, ಕಲಬುರುಗಿ ವಿಭಾಗ, ಕಲಬುರುಗಿ ಇವರ ಓದಲಾಗಿದೆ (3)ರಂತೆ, ಸದರಿ ಪ್ರಕರಣದ ಕುರಿತು ವಿಚಾರಣೆಯನ್ನು ನೆಡಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತಾರೆ. ಶ್ರೀ ಶರಣಪ್ಪ.ಎಸ್.ರಾಸೂರ ಇವರ ಪತ್ನಿಯಾದ ಶ್ರೀಮತಿ ಶಕುಂತಲಾ ಗಂಡ ಶರಣಬಸಪ್ಪ ಇವರಿಗೆ 2013-14ನೇ ಸಾಲಿನಲ್ಲಿ ಬಸವ ವಸತಿ ಯೋಜನೆಯಡಿ ಮಂಜೂರಾದ ಮನೆಯನ್ನು ನಿರ್ಮಿಸದೇ ಸರ್ಕಾರದ ಹಣವನ್ನು ಪಡೆದು ದುರ್ಬಳಕೆ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಹಾಗೂ ಡೊಂಗರಗಾಂವ್ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಮೇಲೆ ಹಲ್ಲೆ ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ವಿಚಾರಣಾ ವರದಿಯಲ್ಲಿ ವಿಶ್ಲೇಷಿಸಿದಂತೆ, ಶ್ರೀ ಶರಣಬಸಪ್ಪ ಎಸ್ ರಾಸೂರ, ಡೊಂಗರಗಾಂವ ಗ್ರಾಮ ಪಂಚಾಯತಿಯ ಸದಸ್ಯರು ಇವರ ಮೇಲೆ ಮಾಡಲಾದ ಎರಡು ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗಿರುವುದು ಕಂಡು ಬಂದಿರುತ್ತದೆಂದು ತಿಳಿಸಿರುತ್ತಾರೆ.

ಸರ್ಕಾರವು ನಿಯಮಾನುಸಾರ ಪ್ರಕರಣವನ್ನು ಪರಿಶೀಲಿಸಿದ್ದು, ಶ್ರೀ ಶರಣಪ್ಪ ಎಸ್. ರಾಸೂರ, ಸದಸ್ಯರು, ಡೊಂಗರಗಾಂವ ಗ್ರಾಮ ಪಂಚಾಯತಿ ರವರ ವಿರುದ್ಧ ಮಾಡಲಾದ ಆರೋಪಗಳು ಸಾಬೀತಾಗಿರುವುದರಿಂದ ಮತ್ತು ಅಧಿಕಾರ ದುರುಪಯೋಗ

ಮಾಡಿರುವುದು ರುಜುವಾತಾಗಿರುವ ಹಿನ್ನೆಲೆಯಲ್ಲಿ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43 (ಎ) ರನ್ವಯ ಸದಸ್ಯತ್ವವನ್ನು ರದ್ದುಗೊಳಿಸಲು ತೀರ್ಮಾನಿಸಲಾಗಿದೆ.

ಅದರಂತೆ, ಶ್ರೀ ಶರಣಪ್ಪ ಎಸ್.ರಾಸೂರ, ಸದಸ್ಯರು, ಡೊಂಗರಗಾಂವ ಗ್ರಾಮ ಪಂಚಾಯತಿ ರವರ ವಿರುದ್ಧ ಮಾಡಲಾದ ಆರೋಪಗಳು ಸಾಬೀತಾಗಿರುವುದರಿಂದ ಮತ್ತು ಅಧಿಕಾರ ದುರುಪಯೋಗ ಮಾಡಿರುವುದು ರುಜುವಾತಾಗಿರುವ ಹಿನ್ನೆಲೆಯಲ್ಲಿ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43 (ಎ) ರನ್ವಯ ಸದಸ್ಯತ್ವ ಸ್ಥಾನದಿಂದ ರದ್ದುಗೊಳಿಸಲು ನಿರ್ಣಯಿಸಿದೆ. ಆದುದರಿಂದ ಈ ಆದೇಶ :

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 113 ಜಿಪಿಎಸ್ 2020, ಬೆಂಗಳೂರು,**

**ದಿನಾಂಕ : 05.05.2020**

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಅಪಾದಿತ ಸದಸ್ಯರಾದ ಶ್ರೀ ಶರಣಪ್ಪ ಎಸ್.ರಾಸೂರ ಇವರ ಪತ್ನಿಯಾದ ಶ್ರೀಮತಿ ಶಕುಂತಲಾ ಗಂಡ ಶರಣಬಸಪ್ಪ ಇವರಿಗೆ 2013-14ನೇ ಸಾಲಿನಲ್ಲಿ ಬಸವ ವಸತಿ ಯೋಜನೆಯಡಿ ಮಂಜೂರಾದ ಮನೆಯನ್ನು ನಿರ್ಮಿಸದೇ ಸರ್ಕಾರದ ಹಣವನ್ನು ಪಡೆದು ದುರ್ಬಳಕೆ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ ಹಾಗೂ ಡೊಂಗರಗಾಂವ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಮೇಲೆ ಹಲ್ಲೆ ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ವಿಚಾರಣಾ ವರದಿಯಲ್ಲಿ ವಿಶ್ಲೇಷಿಸಿದಂತೆ ಶ್ರೀ ಶರಣಬಸಪ್ಪ ಎಸ್ ರಾಸೂರ ಇವರ ಡೊಂಗರಗಾಂವ ಗ್ರಾಮ ಪಂಚಾಯತಿಯ ಸದಸ್ಯರು, ಕಲಬುರುಗಿ ತಾಲ್ಲೂಕು, ಕಲಬುರುಗಿ ಜಿಲ್ಲೆ ಇವರ ಮೇಲೆ ಮಾಡಲಾದ ಎರಡು ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಆದ್ದರಿಂದ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ಅಧಿನಿಯಮದ 1993ರ ಪ್ರಕರಣ 43 (ಎ) ರಂತೆ ಶ್ರೀ ಶರಣಬಸಪ್ಪ ಎಸ್ ರಾಸೂರ, ಡೊಂಗರಗಾಂವ ಗ್ರಾಮ ಪಂಚಾಯತಿಯ ಸದಸ್ಯರು, (ಪ್ರಸ್ತುತ ಅಧ್ಯಕ್ಷರು) ಕಲಬುರುಗಿ ತಾಲ್ಲೂಕು, ಕಲಬುರುಗಿ ಜಿಲ್ಲೆ ಇವರನ್ನು ಡೊಂಗರಗಾಂವ ಗ್ರಾಮ ಪಂಚಾಯತಿಯ ಸದಸ್ಯ ಸ್ಥಾನದಿಂದ ರದ್ದುಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

B. Naveenkumar 05/05/2020.
(ಬಿ. ನವೀನ್ ಕುಮಾರ್)
ಉಪ ನಿರ್ದೇಶಕರು
ಮತ್ತು ಪ.ನಿ. ಸರ್ಕಾರದ ಅಧೀನ ಕಾರ್ಯದರ್ಶಿಗಳು (ಗ್ರಾ.ಪಂ),
ಗ್ರಾಮೀಣಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ :

1) ಮಾನ್ಯ ವಿಚಾರಣಾಧಿಕಾರಿ ಹಾಗು ಪ್ರಾದೇಶಕ ಅಯುಕ್ತರು ಕಲಬುರಗಿ ವಿಭಾಗ ಕಲಬುರಗಿ.
2) ಕಾರ್ಯದರ್ಶಿಗಳು, ರಾಜ್ಯ ಚುನಾವಣಾ ಆಯೋಗ, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು.
3) ಮಾನ್ಯ ಜಿಲ್ಲಾಧಿಕಾರಿಗಳು ಕಲಬುರುಗಿ ಜಿಲ್ಲೆ.ಕಲಬುರಗಿ.
4) ಮಾನ್ಯ ಮುಖ್ಯಕಾರ್ಯನಿರ್ವಾಹಣಾಧಿಕಾರಿ ಕಲಬುರಗಿ ಜಿಲ್ಲಾ ಪಂಚಾಯಿತ್ ಕಲಬುರಗಿ.

5)ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ ಕಲಬುರುಗಿ, ಕಲಬುರುಗಿ ಜಿಲ್ಲೆ.

6)ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಡೊಂಗರಗಾಂವ ಗ್ರಾಮ ಪಂಚಾಯತಿ, ಕಲಬುರುಗಿ ತಾಲ್ಲೂಕು, ಕಲಬುರುಗಿ ಜಿಲ್ಲೆ.

7)ಶ್ರೀ ಶರಣಬಸಪ್ಪ ಎಸ್ ರಾಸೂರ, ಡೊಂಗರಗಾಂವ ಗ್ರಾಮ ಪಂಚಾಯತಿ, ಕಲಬುರುಗಿ ತಾಲ್ಲೂಕು, ಕಲಬುರುಗಿ ಜಿಲ್ಲೆ.

8)ಗಣಕ ಕೋಶ ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಲು.

9)ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

ಪ್ರತಿ ಮಾಹಿತಿಗಾಗಿ :

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂ ರು.
3) ನಿರ್ದೇಶಕರು (ಪಂ.ರಾಜ್-1), ಗ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಸಹಾಯಕರು.

***